ಸರಿಸಾಟಿಯಾದ ಕೃತಿ ಮತ್ತೊಂದಿಲ್ಲ' ಎಂದು ತಮ್ಮ ಮೆಚ್ಚುಗೆ ಸೂಚಿಸಿದ್ದಾರೆ. ಲಕ್ಷ್ಮಿ ಹೋಮ್ಸ್‌ಟ್ರೋಂ (Lakshmi Homstrom) ಎಂಬುವರು 'Beasts of Burden' ಎಂಬ ಶೀರ್ಷಿಕೆಯಲ್ಲಿ ಆಂಗ್ಲ ಭಾಷೆಗೆ ಅದನ್ನು ಅನುವಾದ ಮಾಡಿದ್ದಾರೆ. 2009ರಲ್ಲಿ 'ಕುವೆಂಪು ಭಾಷಾ ಭಾರತಿ' ಮೂಲಕ 'ಹೇಸರಗತ್ತೆಗಳು' (ಕನ್ನಡಕ್ಕೆ: ಡಾ. ಜಯಲಲಿತಾ) ಕನ್ನಡದಲ್ಲೂ ಪ್ರಕಟಗೊಂಡಿದೆ.

'ಕೋವೇರು ಕಳುದೈಗಳ್', ಇಮ್ಮೈಯಂ ಅವರ ಮೊದಲ ಕಾದಂಬರಿ. ಪ್ರಕಟಗೊಂಡು ಇಪ್ಪತ್ತೈದು ವರ್ಷಗಳಾಗಿವೆ. ತಮಿಳು ಕಾದಂಬರಿಗಳಲ್ಲಿ ಮುಖ್ಯವಾದ ಒಂದು ಹರಿವಾಗಿ ಇದನ್ನು ಪರಿಗಣಿಸಲಾಗುತ್ತದೆ. ಒಂದು ಊರಿನ ಚಮ್ಮಾರ ಸಮುದಾಯಕ್ಕೆ ಅಗಸರಾಗಿರುವ ಕೆಲಸ ಮಾಡುವ ಸವುರಿ–ಆರೋಗ್ಯ ಅವರ ಕುಟುಂಬದ ಕಥೆ ಕಾದಂಬರಿಯಲ್ಲಿದೆ. ಮಗಳು ಮೇರಿ, ಅಳಿಯ ದ್ರವ್ಯ ರಾಜ್, ಮಗ ಜೋಸೆಫ್, ಸೊಸೆ ಸಹಾಯಂ, ಕೊನೆಯ ಮಗ ಪೀಟರ್ ಮುಂತಾದವರನ್ನು ಕಥಾಪಾತ್ರಗಳಾಗಿ ಒಳಗೊಂಡ ಕಾದಂಬರಿಯಲ್ಲಿ, ಆರೋಗ್ಯಳೇ ಕಾದಂಬರಿಯ ಪ್ರಮುಖ ಪಾತ್ರ. ಮನೆಮನೆಗೆ ಹೋಗಿ ಕೊಳಕು ಬಟ್ಟೆಗಳನ್ನು ತರುವುದು, ಹೆರಿಗೆ–ಬಾಣಂತನ ಮುಂತಾದ ಸೂಲಗಿತ್ತಿ ಕೆಲಸಗಳನ್ನು ಮಾಡುವುದು, ಎದೆಯಲ್ಲಿ ಹಾಲು ಕಟ್ಟಿಕೊಂಡರೆ ಹಿಚುಕಿ ಸರಿಮಾಡುವುದು, ಗದ್ದೆಗೆ ಹೋಗಿ ಭತ್ತ ನಾಟಿ ಮಾಡುವುದು, ಸಾವಿನ ಮನೆಗಳಲ್ಲಿ ನಡೆಸಬೇಕಾದ ಸಾಂಪ್ರದಾಯಿಕ ಆಚಾರಗಳನ್ನು ಮಾಡುವುದು, ಎಂದು ಊರಿಗೆ ಬೇಕಾದವಳಾಗಿ ಆರೋಗ್ಯ ಇರುತ್ತಾಳೆ. ಆದರೆ ಅವಳಿಗೆ ಕ್ರಮವಾಗಿ ಸೇರಬೇಕಾದ ಧಾನ್ಯವನ್ನೂ, ಹಂದಿಯ ತಲೆ, ಕರುಳನ್ನೂ ಅವಳಿಗೆ ಕೊಡಲು ಜನ ನಿರಾಕರಿಸುತ್ತಾರೆ. ಕಾಲಕ್ರಮೇಣ ಜೀವನ ಬದಲಾಗುತ್ತದೆ. ಹಿಂದಿನ ಹಕ್ಕುಗಳೂ, ಸಲಿಗೆಗಳೂ ಕಡಿಮೆಯಾಗುತ್ತಾ ಹೋಗುತ್ತವೆ. ಆದರೆ, ಈ ಬದಲಾವಣೆಯಿಂದಾಗಿ ರೂಢಿಗತ ಬದುಕಿನಿಂದ ದೂರ ಸರಿಯುವ ಹಕ್ಕು ಅವರಿಗೆ ಇಲ್ಲವೆಂದು ಹೇಳಲಾಗುತ್ತದೆ. ದೂರ ಸರಿಯುವ ಜೋಸೆಫ್‌ನ ಕಾರಣ ಅವಳನ್ನು ಜನ ಖಂಡಿಸುತ್ತಾರೆ. ಸವುರಿಗೂ ಕರುಪ್ಪಾಯಿಗೂ ಇರುವ ಅಕ್ರಮ ಸಂಬಂಧವನ್ನು ಸಣ್ಣದಾಗಿ ಗೆರೆಯೆಳೆದು ತೋರಿಸಲಾಗಿದೆ. ಸಡೈಯನ್ ಮೇರಿಯನ್ನು ಬಲಾತ್ಕಾರ ಮಾಡಿದಾಗ, ಅದಕ್ಕೆ ಯಾವ ವಿರೋಧವನ್ನೂ ವ್ಯಕ್ತಪಡಿಸದೆ, ಮೌನವಾಗಿ ಅದನ್ನು ಸಹಿಸಿಕೊಳ್ಳಬೇಕಾಗುತ್ತದೆ. ಆರೋಗ್ಯಳಿಗೂ ಸೊಸೆ ಸಹಾಯಂಗೂ ಇರುವ ಸಂಬಂಧ ಈ ಕಾದಂಬರಿಯ ಮುಖ್ಯ ಎಳೆ. ಒಂದು ಬಗೆಯ ಪ್ರೀತಿಯೂ ದ್ವೇಷವೂ ಇರುವ ಬಾಂಧವ್ಯ. ಎರಡು ತಲೆಮಾರಿನ, ಎರಡು ಭಿನ್ನ ಬದುಕುಗಳ ನೋಟಕ್ಕೆ ಇರುವ ವಿರೋಧಾಭಾಸ ಅವರಿಬ್ಬರ ಸಂಬಂಧದಲ್ಲಿ ಎದ್ದುಕಾಣುತ್ತದೆ. ಭಾವಪೂರ್ಣವಾದ ಬದುಕಿನ ಸಂಘರ್ಷದ ಕಥೆಯಾಗಿ 'ಕೋವೇರು ಕಳುದೈಗಳ್' ಓದುಗರ ಮನಸ್ಸು ಗೆದ್ದಿದೆ.

ಇಮ್ಮೈಯಂ ಅವರ ಉಳಿದ ಕಾದಂಬರಿಗಳು 'ಆರುಮುಗಂ', 'ಸೆಡಲ್' ಹಾಗೂ 'ಎಂಗದೆ'. ಅವರ ಇತ್ತೀಚಿನ ಕಾದಂಬರಿ 'ಸೆಲ್ಲಾದ ಪಣಂ'. 'ಮಣ್ಬಾರಾಂ', 'ವಿಡಿಯೋ ಮಾರಿಯಮ್ಮಾ', 'ಕೊಲೈಚ್ಚೇವಲ್', 'ಸಾವುಚ್ಚೋರು', 'ಪೆತ್ತವನ್', 'ನರುಮಣಂ', 'ನನ್ ಮಾರನ್ ಕೋಟ್ಟೈ ಕದೈ' ಅವರ ಕಥಾಸಂಕಲನಗಳು.

ಇಮ್ಮೈಯಂ ಅವರ ಕಥೆ ಕಾದಂಬರಿಗಳಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಕೆಲವು ಅಂಶಗಳನ್ನು ಕೆಳಗಿನಂತೆ ಗುರ್ತಿಸಬಹುದು:

* ತಮಿಳುನಾಡಿನ ಗ್ರಾಮಗಳಲ್ಲಿ ಇರುವ ಅಮಾನವೀಯ ಆಚರಣೆಗಳನ್ನು ಗುರುತಿಸುವ ಅವರ ಕೃತಿಗಳು, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿರೋಧಾಭಾಸಗಳನ್ನೂ, ದಬ್ಬಾಳಿಕೆಯ ಕ್ರೌರ್ಯವನ್ನೂ ಓದುಗರ ಮುಂದಿಡುತ್ತವೆ.
* ದಲಿತರ ಬದುಕನ್ನು, ಅವರ ವ್ಯಥೆಗಳನ್ನು, ಅವರ ಹೋರಾಟಗಳನ್ನು ಭಾವಾವೇಶ ಇಲ್ಲದೆ, ಅತಿರೇಕವಿಲ್ಲದೆ, ಸಹಜವಾಗಿ ದಾಖಲಿಸಿವೆ.
* ಇಮ್ಮೈಯಂ ಅವರ ಬರವಣಿಗೆಯ ಉದ್ದೇಶ, ಮಾನವ ಬದುಕಿನ ಎಲ್ಲ ಹಿರಿಮೆ ಗರಿಮೆಗಳನ್ನೂ, ಪ್ರಕೃತಿಯ ಮುಂದೆ ಮನುಷ್ಯ ಸೋತು ಹೋಗುವ ಕ್ಷಣಗಳನ್ನೂ, ಬದುಕಿನ ಖಾಲಿತನವನ್ನೂ ಅರಿತುಕೊಳ್ಳುವ ಪ್ರಯತ್ನವಾಗಿರುವುದು.

ತಮಿಳು ದಲಿತ ಸಾಹಿತ್ಯದಲ್ಲಿ ಯಥಾರ್ಥತೆಯನ್ನೂ, ಸೂಕ್ಷ್ಮ ಸಂವೇದನೆಯನ್ನೂ ರೂಪಿಸುವ ಪ್ರಮುಖ ಸಾಹಿತಿ ಎಂದು ಇಮ್ಮೈಯಂ ಅವರ ಕುರಿತು ಹೇಳಬಹುದು. ದಲಿತ ಸಂಪ್ರದಾಯದ ಬಗ್ಗೆಯೂ,